

'ನಮ್ಮ ಜೊತ್ಗೆ ಮಾತಾಡ್ಲಿಕ್ಕೆ ಅವ್ನಿಗೆ ಅಂತಾ ಸಹನೆಯಿರ್ಲಿಲ್ಲ. ದಕ್ಷಿಣದಲ್ಲಿ ಅವ್ರ ಹೆಸ್ರುಗಳ್ನಾ ಫೋಣ್ಸೆ ಪೋಲಿ ಹಾಡ್ಗಳ್ನಾ ಹಾಡ್ತಿದ್ವೀಂತಾ ಹೇಳ್ದ.

'ಆದ್ರೆ ನಾವ್ಯಾವಾಗ ಹೋಗ್ತಿದ್ದೀವಿ? ನಾ ಅವ್ನನ್ನಾ ಕೇಳ್ದೆ.

'ಅವ್ನೇನ್ ಹೇಳ್ದಾ ಅಂದ್ರೇ, ತಾನ್ ಬಂದಿದ್ದೇ ಅದ್ಕಾಗೇ ಅಂದ. ಆದ್ರೆ ತನ್ನೊತೆ ನನ್ನ ಕರ್ಕೊಂಡ್ ಹೋಗೋಕೆ ಸಾಧ್ಯವಾಗ್ತಾಯಿಲ್ಲ... ನಿಂಗೆ ಗೊತ್ತಲ್ಲ... ನಾವ್ ಇಂಗ್ಲೀಷ್ ಜನ್ರ ಆಡಳಿತದಡಿಯಿದ್ದು, ಅವರೆಲ್ಲೂ ಜರ್ಮನ್ರು ಜನ್ರೂ ಜೊತ್ಗೆ ಕಾದಾಡ್ತಿರೋದಾಗಿ ಹೇಳ್ದ.

'ನಾ ಹೇಳೋದ್ ಕೇಳ್ ಮಗೂ, ಯಾಕೇಂದ್ರೆ ನಾನೂ ಕೂಡಾ ಬಾಯಿಬಿಟ್ ಅದ್ನೇ ಕೇಳಿದ್ದು, ಅವೆಲ್ಲಾ ಕಟ್ಕಂಡ್ ನಂಗೂ ನಿಂಗೂ ಆಗ್ಬೇಕಾದ್ದೇನು? ನಿನ್ನ ಜೊತೆ ನಾ ದಕ್ಷಿಣಕ್ಕೆ ಬರ್ಲಿಕ್ಕೆ ಯಾಕೆ ಸಾಧ್ಯಯಿಲ್ಲಾ? ಅಂತಾ.

'ಯಾಕೆಂದ್ರೆ ನಾ ಸಮುದ್ರದಾಚ್ಗೆಯಿರೋ ಜಾಗಕ್ಕೆ ಹೋಗಿ ಯುದ್ಧ ಮಾಡ್ಬೇಕ್ಕಾಗುತ್ತೆ.

'ಯಾವ್ದೋ ಜನ್ರ ಕಾದಾಟಕ್ಕಾ? ಕೂಸೇ, ನೀನಿದ್ರೆ ಏನ್ ಕೇಳ್ತಿದ್ಯೋ ಅದ್ನೇ ಅವನತ್ರ ನಾ ಕೇಳ್ದೆ.

'ಅದೇನೂ ನೀ ಅಂದ್ಕೊಂಡಷ್ಟು ಸರಳ ಅಲ್ಲ, ಅವ್ನೆಂದ.

'ನಮ್ಗೆ ಅವ್ನಾ ಅರ್ಥ ಮಾಡ್ಕೋಳ್ಳಾಗಲಿಲ್ಲ. ನೀ ಹೋಗ್ಬಾರ್ದು, ಅವ್ನಪ್ಪ ಅಂದ್ರು. ನೀ ಹೋಗ್ಬೇಡಾ, ಯಾಕೇಂದ್ರೆ, ಗ್ರನಶೀಶ್, ಗೋನಜಾಸ್ ಜೊತ್ಗೆ ಕಾದಾಡ್ಬೇಕಿರೋರು ನಾವಲ್ಲ.

'ನಂಗೆ ಇಂಗ್ಲೀಷ್ ಜನ್ರ ಬಗ್ಗೆ ಗೊತ್ತಿತ್ತು. ಆದ್ರಾವ ಜರ್ಮನ್ರ ಜನ್ರು ಬಗ್ಗೆಯೂ ಗೊತ್ತಿರ್ಲಿಲ್ಲ. ಅದ್ರೆ ಅವ್ರೆಲ್ಲಾ ಅವ್ರವ್ರ ದೇಶದಲ್ಲಿದ್ರು.

'ಅವ್ನಪ್ಪಾ ಹೇಳೋಷ್ಟು ಹೇಳಿದ್ರು, ನಾನೂ ಅಷ್ಟೇ.

''ಒಬ್ ಸೈನಿಕ ಎಲ್ಲಾ ಸಮಯದಲ್ಲೂ ವಿಧೇಯನಾಗಿರ್ಬೇಕು, ಅವ್ನೆಂದ.

'ನಂಗೇನೋ ಅವನ್ನೊತೆ ಏನೇನೋ ಕಳ್ಳಿಕೊಡ್ಬೇಕಂತಾಯಿತ್ತು, ಆದ್ರವನು ಕೋಲಾ ಮಾತ್ರ ತಕ್ಕೊಂಡ್ ಹೋಗ್ತೀನಂದ.

'ಆಮ್ಯಾಲೆ ಸುದ್ದಿ ಬಂತು. ನನ್ ತಲೆಗದು ಹೋಗ್ಲೇಯಿಲ್ಲ, ಯಾಕೆಂದ್ರೆ ತಲೆ ಪೂರಾ ಖಾಲಿಯಾಗಿತ್ತು. ಎಲ್ಲಾನೂ ನನ್ನ ಗರ್ಭದೊಳ್ಗೆ ಸೇರ್ಕೊಂಡ್ಬಿಡ್ತು. ನೀನಾಗ ಬರೀ ಮೂರ್ ದಿವ್ಸದ್ ಕೂಸು.

'ಸುದ್ದಿ ಬೆಂಕಿ ಹಂಗೆ ನನ್ನ ಹೊಟ್ಟೆಯಾಳದ್ ಕುಳಿಯೊಳ್ಗೆ ನೆಲೆಸಿಬಿಟ್ಟು. ಆಮ್ಯಾಲೆ, ಅವಾಗವಾಗ, ಕಾಲದಿಂದಾ ಕಾಲಕ್ಕೆ ಅವೆಲ್ಲಾ ಕೆಲವ್ ಸರ್ತಿ ರಭಸದಿಂದ ಮ್ಯಾಲೆ ಚಿಮ್ಮಿ, ನನ್ ಗರ್ಭನ್ನಾ ಕುದ್ಸಿ ಬತ್ತಿಸ್ತಾ, ನನ್ ಕರುಳ್ನಾ ಸೀಯಿಸಿ ಕರ್ಟಿಸ್ತಾ ಉರ್ದೂ, ಉರ್ದೂ ಹಾಕ್ಬಿಡುತ್ತೆ... ಕಡೀಗೆ ಹುಚ್ಚಿನಿಂದ ಕಿರಿಚ್ಕೊಂಡ್ಬಿಡುತೀನಿ, ಈ ವಿಷ್ಯ ನನ್ ತಲೆಯೊಳ್ಗೆ ಸೇರ್ಕೊಂಡಾಗಲೆಲ್ಲಾ...

'ನೀ ಹುಟ್ಟಾಗ, ಇದ್ ಹುಡ್ಗಿಯಾದ್ರೂ ಪರ್ವಾಗಿಲ್ಲಾಂತ ನಾ ಮನಸ್ನೊಳ್ಗೇ ಅಂದ್ಕೊಂಡೆ. ಅಲ್ಲಾಹ್ ಕೊಡೋ ಎಲ್ಲಾ ವರಗಳೂ ಒಳ್ಳೇದಕ್ಕೆ, ಹೆಂಗಿದ್ರೂ ಅವ್ನು ವಾಪಾಸ್ ಬರ್ತಾನೆ, ಮತ್ತಷ್ಟು ಮಕ್ಳಾಗ್ತವೆ ನಮ್ಗೆ, ರಾಶಿ, ರಾಶಿ ಗಂಡು ಮಕ್ಳೂಂತಾ ಅಂದ್ಕೊಂಡೆ.

'ಆದ್ರೆ ಹವಾ, ನಿಂಗೆ ತುಂಬಾ ಶಕ್ತಿಯಿತ್ತು, ಹೆಂಗೆ ನಿರ್ವಹಿಸ್ಕೊಂಡ್ ನೀ ಬದುಕಿದ್ಯೋ ನಂಗೊತ್ತಲ್ಲ. ನೀಯಿನ್ನೂ ಮೂರ್ ದಿವ್ಸದ್ ಕೂಸು, ಹಠಾತ್ತನೆ ಅಪ್ಪಳಿಸಿದ್ದ ಬಿರುಗಾಳಿಗೆ ದಿಕ್ಕಾಪಾಲಾಗಿ ಹಿಮ್ಮುಖ ಸರಿಯೋ ತೊರೆ ಹಂಗೆ, ನನ್ನ ಮೊಲೆಗಳ್ ಬತ್ತೋಗಿತ್ತು. ಹವಾ, ನಿಂಗೆ ತುಂಬಾ, ತುಂಬಾನೇ ಶಕ್ತಿಯಿದೆ.

'ಆಮ್ಯಾಲೆ, ನಾ ದಕ್ಷಿಣಕ್ಕೋಗಿ, ಸರ್ಕಾರಿ ಜನ್ರಿಗೆ ನಾ ಅವ್ನ ಹೆಂಡ್ತೀಂತಾ ಸಾಬೀತು ಮಾಡಿ ತೋರ್ಸಿದ್ದಿದ್ರೆ, ನಂಗೆ ಬೇಕಾದಷ್ಟು ದುಡ್ಡು ಬರತ್ತಿತ್ತೂಂತಾ ಅವ್ರೂ ಹೇಳಿದ್ರೂ.

'ಆದ್ರೆ ನಾ ಹೋಗ್ಲಿಲ್ಲ. ನಂಗೆ ಅವ್ನು ಬೇಕಿತ್ತು, ಬಂಗಾರವಾಗಿ ಬದಲಾದ ಅವ್ನ ದೇಹವಲ್ಲ.

'ನಾ ಕಡೆಗೂ ದಕ್ಷಿಣನಾ ನೋಡ್ಲಿಲ್ಲ.

'ಓಹ್?' ಅಂತಾ ನೀ ಹೇಳ್ತೀಯಾ ಮಗಳೇ, ಎಂದೋ, ಬಹಳಾ ಹಿಂದೆಯೇ ಯಾವಾಗ್ಲೋ, ಪ್ರಪಂಚನ್ನಾ ಸೃಷ್ಟಿ ಮಾಡಾಗಿದೇಂತಾ ನಾ ನಿಂಗೆ ಯಾವಾಗ್ಲೂ ಹೇಳ್ತಾ ಇರ್ತೀನಲ್ಲಾ ಮಗಳೇ, ಅದ್ದೇ ಇಲ್ಲಿ ವಯಸ್ಸಾಗಿರೋರ್ನಷ್ಟೇ ನೀ ಕಾಣಬೋದೇ ಹೊರ್ತು ಎಳೆಯವರ್ನೇನಲ್ಲ. ಅದ್ಕೆ 'ಓಹ್' ಅನ್ನಬ್ಯಾಡ.

'ಆ ಜನ್ರು, ಅದೇ ಸರ್ಕಾರಿ ಜನ್ರು, ಬಂದ್ಹೋಗಿ ಮಾ ಡ್ತಾಯಿ ತಾ ರ ಲ್ಲಾ , ವ್ಯಾಪಾರ ತುಂಬಾ ಕೆಟ್ಟದೆಯೀಗ, ಮತ್ತೊಮ್ಮೆ ಬಟ್ಟೆಯಾಗ್ಲೀ, ಡಬ್ಬದ ಮೀನ್ಗಳಾಗ್ಲೀ ಇಲ್ಲಾ ಅನ್ನೋರು. ಆದ್ರೆ ಈ ಸರ್ತಿ ಬಂದೋರು ನಮ್ಮಕ್ಕಳಿಗೆ ಬೇಕಾದಷ್ಟು ಸಿಗುತ್ತೆ ಒಂದು ದಿನಾಂತ ಹೇಳ್ತಿದಾರಪಾ.

'ಆದ್ರೀಗ, ಐಷಾ ದಕ್ಷಿಣದ ಕಡ್ಗೆ ಹೋದ. ಯಾಕೇಂದ್ರೆ, ತನ್ನ ಹೆಂಡ್ತಿ ಹೆರಿಗೇಲಿ ಆಡಿನ ಮಾಂಸ ಕೂಡಾ ಹೊಂದಿಸೋಕೆ ಅವ್ನ ಕೈಲಾಗಲಿಲ್ಲ. ಅಂದ್ರೇನು, ಹುಸೇನಿ ತನ್ನೆಂಡ್ತಿ ಜೊತೆಯಿದ್ದು, ಅವ್ಳೊಂದಿಗೆ ದನದ ಮಾಂಸ ತಿನ್ಕಂಡ್ ಇರ್ಲಿಯೆಂದೇ? ಹೂಂ... ಆಮ್ಯಾಲೆ, ಜೀವಂತವಾಗಿ ಹಿಂತಿರುಗಿ ಬರ್ತಾನವನು... ಬಹುಶಃ ಮುಂದಿನ್ ರಮಜಾನ್ ಹೊತ್ಗೋ ಅಥ್ವಾ ಅದರ ಮುಂದಿನದ್ದೋ ಏನೋ. ಇದೀಗ, ನನ್ ಮಗಳೇ, ಕಾದಾಡೋಕೆ ಹೋದ ಮತ್ತೊಬ್ಬ ಮನುಷ್ಯನ ಕತೆಯೂ ನಿಂಗೆ ಗೊತ್ತಾಯ್ತು. ಮತ್ತೊಂದು ಕೂಸೇ, ಬ್ಯಾರೆ ಯಾರೋ ಜನ್ರ ಯುದ್ಧಕ್ಕೆ ಸೆಣಸಾಡ್ಲಿಕ್ಕೆ ಹೋದವ್ರು ಮತ್ತೆಂದಿಗೂ ವಾಪಾಸ್ ಬರೋದಿಲ್ಲ ಮಗಳೇ.

'ನಾನೀಗ ಸಂತೆಗೆ ಹೋಗ್ತಿದೀನಿ. ಬೇಗೆದ್ದು ಹುಸೇನಿಗೆ ಸ್ನಾನ ಮಾಡ್ಸು. ಆ ದರಿದ್ರ ಕೋಲಾಕ್ಕೆ ಎಂತಾದ್ರೂ ಸಿಗುತ್ತಾಂತಾ ನೋಡ್ಕೊಂಡ್ ಬರ್ತೀನಿ. ಇಬ್ರಿಗೆ ಸಾಕಾಗೋಷ್ಟು ಅಕ್ಕಿಯಿದೆ, ಇದೆಯಲ್ಲಾ?

'ಒಳ್ಳೇದು. ಇವತ್ತು ನನ್ನೆಲ್ಲಾ ದುಡ್ಡು ಹೋದ್ರೂ ಸರಿ, ಒಂದೊಳ್ಳೆ ಊಟ ಮಾಡೋದಕ್ಕೆ ಇರೋದ್ರಲ್ಲೇ ದಪ್ಪಗಿರೋ ಒಂದಷ್ಟು ಹೊಗೆಯಾಡೋ ದೊಡ್ಡ ಮೀನ್ಗಳಾದ್ರೂ ನಮಗಿವತ್ತು ಸಿಗುತ್ತಂದ್ಕೋತೀನಿ..